2) *ಹಾಗಿದ್ದಲ್ಲಿ ಆವುಗಳಲ್ಲಿ ಹರಿಜನ ಗಿರಿಜನ ಗ್ರಾಮಗಳು ಹಾಗೂ ಲಂಬಾಣಿ ತಾಂಡಾಗಳ ಸಂಖ್ಯೆ ಎಷ್ಟು?*

3) *ಮೇಲ್ಕಂಡ ಎಲ್ಲಾ ಗ್ರಾಮಗಳಿಗೆ ಸಂಪೂರ್ಣವಾಗಿ ವಿದ್ಯುತ್ ಒದಗಿಸಲು ಕೂಡಲೆ ಕ್ರಮ ಕೈಗೊಳ್ಳುವುದೇ? ಹಾಗೂ ಎಷ್ಟು ವರ್ಷಗಳಲ್ಲಿ ಒದಗಿಸಲಾಗುವುದು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಗಂಡಸೀ ಕ್ಷೇತ್ರದಲ್ಲಿ 1981ರ ಜನಗಣತಿಯ ಮೇರೆಗೆ 321 ಕಂದಾಯ ಗ್ರಾಮಗಳಿದ್ದು ಆವುಗಳ ಪೈಕಿ 36 ಬೇಚರಕ್ ಗ್ರಾಮಗಳನ್ನು ಬಿಟ್ಟು ಉಳಿದ 285 ಗ್ರಾಮಗಳನ್ನು ವಿದ್ಯುದ್ದೀಕರಣ ಮಾಡಿದೆ. 36 ಕಂದಾಯ ಗ್ರಾಮಗಳು ಬೇಚರಕ್ ಆಗಿರುವುದರಿಂದ ಇವುಗಳನ್ನು ವಿದ್ಯುದೀಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) 'ಅ'ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಗಂಡಸೀ ಕ್ಷೇತ್ರದ ಕೃಷಿ ಬಾವಿಗಳಿಗೆ ವಿದ್ಯುತ್ ಪೂರೈಕೆ

251 - ಶ್ರೀ ಬಿ.ಶಿವರಾಮು (ಗಂಡಸೀ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗಂಡಸೀ ಕ್ಷೇತ್ರದಲ್ಲಿ ಫೆಬ್ರವರಿ ಅಂತ್ಯದವರೆಗೆ ವಿದ್ಯುತ್ ಪೂರೈಕೆಯಾಗದೇ ಒಟ್ಟು ಬಾಕಿ ಇರುವ ಕೃಷಿ ಬಾವಿಗಳ ಸಂಖ್ಯೆ ಎಷ್ಟು? ಮತ್ತು ಎಷ್ಟು ವರ್ಷಗಳಿಂದ ಬಾಕಿ ಇದೆ?*

ಆ) *ಈ ಕೃಷಿ ಬಾವಿಗಳಿಗೆ ವಿದ್ಯುತ್ ಪೂರೈಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಗಂಡಸೀ ಕ್ಷೇತ್ರದಲ್ಲಿ ಫೆಬ್ರವರಿ 1991ರ ಅಂತ್ಯದವರೆಗೆ ವಿದ್ಯುತ್ ಪೂರೈಕೆಯಾಗದೇ ವಿವಿಧ ಹಂತಗಳಲ್ಲಿ ಬಾಕಿ ಇರುವ ಕೃಷಿ ಬಾವಿಗಳ ಅರ್ಜಿಗಳ ಸಂಖ್ಯೆ 353 ಮತ್ತು ಇವುಗಳಲ್ಲಿ ಕೆಲಸ ಅರ್ಜಿಗಳು ಸುಮಾರು ಎರಡು ವರ್ಷಗಳಿಂದ ಬಾಕಿ ಇದೆ.

ಆ) ರಾಜ್ಯದಲ್ಲಿ ಬಾಕಿ ಇರುವ ಕೃಷಿ ಬಾವಿಗಳಿಗೆ ವಿದ್ಯುತ್ ಪೂರೈಸಲು ಸರ್ಕಾರವು ಈ ಸಾಲಿಗೆ ನಿಗದಿಪಡಿಸಿದ್ದ ನೀರಾವರಿ ಬಾವಿಗಳ ಗುರಿಯನ್ನು 40,000 ದಿಂದ 60,000ಕ್ಕೆ ಏರಿಸಲಾಗಿದೆ.

ಬಚಾವತ್ ತೀರ್ಪಿಗನುಗುಣವಾಗಿ ರಾಜ್ಯದ ಪಾಲಿನ ಸಂಪೂರ್ಣ ನೀರಿನ ಬಳಕೆ

1044 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಚಾವತ್ ತೀರ್ಪಿಗನುಗುಣವಾಗಿ ರಾಜ್ಯದ ಪಾಲಿನ ಸಂಪೂರ್ಣ ನೀರಿನ ಬಳಕೆ ಮಾಡಿಕೊಳ್ಳಲು ಹಾಗೂ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲು ಸರ್ಕಾರ ಯೋಚಿಸಿದೆಯೇ?*

ಆ) *ಹಾಗಿದ್ದಲ್ಲಿ ಯಾವ ಯಾವ ನೀರಾವರಿ ಯೋಜನೆಗಳನ್ನು ಪ್ರಾರಂಭಿಸಲಾಗಿದೆ, ಹಾಗೂ ಯಾವ ಯಾವ ಯೋಜನೆಗಳನ್ನು ಪ್ರಾರಂಭಿಸಲು ಸರ್ಕಾರ ತೀವ್ರ ಕ್ರಮ ಕೈಗೊಳ್ಳಲುದ್ದೇಶಿಸಿದೆ?*

ಇ) *2000ನೇ ಇಸವಿಯೊಳಗಾಗಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿಯ ನೀರಿನ ಪೂರ್ಣ ಬಳಕೆ ಹಾಗೂ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅವಶ್ಯವಿರುವ ಹಣದ ಮೊತ್ತವೆಷ್ಟು?*